# ಕರ್ನಾಟಕ ಮಾಹಿತಿ ಆಯೋಗ

## ದಿನಾಂಕ: 04-01-2017ರಂದು ಸಂಜೆ 4.30ಕ್ಕೆ ಮಾನ್ಯ ರಾಜ್ಯ ಮುಖ್ಯ ಮಾಹಿತಿ ಆಯುಕ್ತರು (ಪ್ರ), ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಗಳು.

ಸಭೆಯಲ್ಲಿ ಹಾಜರಿದ್ದವರು:-

1. ಶ್ರೀ ಎಲ್. ಕೃಷ್ಣಮೂರ್ತಿ, ರಾಜ್ಯ ಮುಖ್ಯ ಮಾಹಿತಿ ಆಯುಕ್ತರು (ಪ್ರ)
2. ಶ್ರೀ ಶಂಕರ್ ಆರ್ ಪಾಟೀಲ್, ರಾಜ್ಯ ಮಾಹಿತಿ ಆಯುಕ್ತರು
3. ಶ್ರೀ ಎನ್.ಪಿ. ರಮೇಶ್, ರಾಜ್ಯ ಮಾಹಿತಿ ಆಯುಕ್ತರು
4. ಶ್ರೀ ಕೆ.ಎಂ. ಚಂದ್ರೇಗೌಡ, ರಾಜ್ಯ ಮಾಹಿತಿ ಆಯುಕ್ತರು
5. ಶ್ರೀ ಪಿ.ಜಿ. ವಿಜಯಕುಮಾರ್, ರಾಜ್ಯ ಮಾಹಿತಿ ಆಯುಕ್ತರು
6. ಡಾ॥ ಸುಚೇತನ ಸ್ವರೂಪ್, ರಾಜ್ಯ ಮಾಹಿತಿ ಆಯುಕ್ತರು
7. ಡಾ॥ ಸುನೀಲ್ ಪಂವಾರ್, ಕಾರ್ಯದರ್ಶಿ
8. ಶ್ರೀಮತಿ ಶ್ರೀಲತಾ ಕೋಟೇಮಠ್, ಅಧೀನ ಕಾರ್ಯದರ್ಶಿ

ಶ್ರೀ ಎಲ್. ಕೃಷ್ಣಮೂರ್ತಿ, ಮಾನ್ಯ ಮುಖ್ಯ ಮಾಹಿತಿ ಆಯುಕ್ತರು (ಪ್ರ), ಸಭೆಗೆ ಎಲ್ಲರನ್ನು ಸ್ವಾಗತಿಸಿದರು.

**ಈ ಸಭೆಯಲ್ಲಿ ಚರ್ಚಿಸಲಾದ ವಿಷಯಗಳು:-**

**1) ಅನುಪಾಲನಾ ವರದಿ.**

ಕರ್ನಾಟಕ ಮಾಹಿತಿ ಆಯೋಗದಲ್ಲಿ ದಿನಾಂಕ: 01-12-2016ರಂದು ನಡೆದ ಸಭೆಯ ಅನುಪಾಲನಾ ವರದಿಯನ್ನು ಕಾರ್ಯದರ್ಶಿಯವರು ಸಭೆಗೆ ಒಪ್ಪಿಸಿದರು.

**2) ನೂತನ ಕಟ್ಟಡದ ಉದ್ಘಾಟನೆ ಕುರಿತು.**

ಸನ್ಮಾನ್ಯ ಮುಖ್ಯ ಮಂತ್ರಿಗಳು ಆಯೋಗದ ನೂತನ ಕಟ್ಟಡದ ಉದ್ಘಾಟನೆಗೆ ಒಪ್ಪಿ, ದಿನಾಂಕ:30-01-2017ಕ್ಕೆ ನಿಗಧಿಪಡಿಸಿದ್ದು, ಅಲ್ಪಸಮಯ ಮಾತ್ರ ಉಳಿದಿರುವುದರಿಂದ ನೂತನ ಕಟ್ಟಡದ ಪ್ರತಿ ದಿನದ ಕಾರ್ಯ ಪ್ರಗತಿಯನ್ನು ಮಾನ್ಯ ಆಯುಕ್ತರುಗಳಾದ ಶ್ರೀ ಕೆ.ಎಂ. ಚಂದ್ರೇಗೌಡ, ಶ್ರೀ ಎನ್.ಪಿ. ರಮೇಶ್, ಶ್ರೀ ಪಿ.ಜಿ. ವಿಜಯ ಕುಮಾರ್ ಹಾಗೂ ಡಾ॥ ಸುಚೇತನ ಸ್ವರೂಪ, ಇವರುಗಳು ಆಗ್ಗಿಂದಾಗೆ ಭೇಟಿ ನೀಡಿ ಪ್ರಗತಿಯು ತ್ವರಿತಗತಿಯಲ್ಲಿ ಸಾಗುವಂತೆ ಮುಖ್ಯ ಅಭಿಯಂತರರೊಡನೆ (ಲೋಕೋಪಯೋಗಿ ಇಲಾಖೆ) ಸಂಪರ್ಕದಲ್ಲಿರಬೇಕೆಂದು ನಿರ್ಣಯಿಸಿ, ಇವರೊಂದಿಗೆ ಕಾರ್ಯದರ್ಶಿಗಳು, ಕರ್ನಾಟಕ ಮಾಹಿತಿ ಆಯೋಗ, ಇವರು ಸಹ ಸಂಪರ್ಕದಲ್ಲಿದ್ದು, ಕಾರ್ಯ ಪೂರ್ಣಗೊಳ್ಳಲು ಎಲ್ಲಾ ರೀತಿಯ ಸಹಕಾರದೊಂದಿಗೆ ಕಟ್ಟಡವನ್ನು ನಿಗದಿತ ದಿನಾಂಕಕ್ಕೆ ಮುಂಚಿತವಾಗಿ ಆಯೋಗದ ವಶದಲ್ಲಿರುವಂತೆ ಗಮನಹರಿಸಲು ಆಯುಕ್ತರುಗಳಿಗೆ ಮತ್ತು ಕಾರ್ಯದರ್ಶಿಯವರಿಗೆ ತಿಳಿಸಲಾಯಿತು.

ಕ್ರಮ ಕಾರ್ಯದರ್ಶಿ

**3) ಅಧ್ಯಕ್ಷರ ಅನುಮತಿ ಮೇರೆಗೆ ಇತರೆ ವಿಷಯಗಳು.**

1) ಆಯೋಗದ ಕೆಲಸ-ಕಾರ್ಯಗಳಿಗೆ ಅನುವಾಗುವಂತೆ ಮತ್ತು ಆಯೋಗದ ಮತ್ತೊಂದು ವಾಹನವನ್ನು ಕಾರ್ಯೋನ್ಮುಖಿಗೊಳಿಸಲು ಈಗಿರುವ 08 ಜನ ವಾಹನ ಚಾಲಕರೊಂದಿಗೆ ಮತ್ತೊಬ್ಬ ವಾಹನ ಚಾಲಕರ ಅಗತ್ಯತೆ ಇದ್ದು, ಹುದ್ದೆ ಮಂಜೂರಾಗಿದ್ದು, ಬಿ.ಎಂ.ಟಿ.ಸಿ., ಮತ್ತು

ಕೆ.ಎಸ್.ಆರ್.ಟಿ.ಸಿ., ವತಿಯಿಂದ ಯಾವುದೆ ವಾಹನ ಚಾಲಕರ ನಿಯೋಜನೆಯಾಗದಿರುವುದರಿಂದ ಆಯೋಗದ ಕೆಲಸಕಾರ್ಯಗಳನ್ನು ಗಮನದಲ್ಲಿಟ್ಟುಕೊಂಡು ಆಯೋಗದಲ್ಲಿ ಖಾಲಿ ಇದ್ದ ವಾಹನ ಚಾಲಕರ ಹುದ್ದೆಗೆ ಹೊರಗುತ್ತಿಗೆ ಆಧಾರದ ಮೇಲೆ ವಾಹನ ಚಾಲಕರೊಬ್ಬರನ್ನು ದಿನಾಂಕ:28-12-2016ರಿಂದ ನೇಮಕ ಮಾಡಿಕೊಂಡಿರುವುದಾಗಿ ಕಾರ್ಯದರ್ಶಿಯವರು ಸಭೆಗೆ ತಿಳಿಸಿದರು. ಹೊರಗುತ್ತಿಗೆ ಆಧಾರದ ಮೇಲೆ ತೆಗೆದುಕೊಂಡಿರುವುದಕ್ಕೆ ಒಪ್ಪಿ, ವಾಹನ ಚಾಲಕರಿಗೆ ಸೂಕ್ತ ನಿರ್ದೇಶನವನ್ನು ನೀಡುವ ಜವಾಬ್ದಾರಿಯೊಂದಿಗೆ ಕಾರ್ಯದರ್ಶಿಯವರಿಗೆ ಕ್ರಮವಹಿಸಲು ಸೂಚಿಸಿತು.

ಕ್ರಮ ಕಾರ್ಯದರ್ಶಿ

2) ಈಗಾಗಲೇ ಕಳೆದ ಸಭೆಯಲ್ಲಿ ತೀರ್ಮಾನ ಕೈಗೊಂಡಂತೆ ಮೊಬೈಲ್ ಆಪ್ ಒಂದನ್ನು ತಯಾರಿಸಲು ಅತೀ ಕಡಿಮೆ ದರ ನಮೂದಿಸಿದ Altius Solutions, Bengaluru, ಸಂಸ್ಥೆಗೆ ಕಾರ್ಯಾದೇಶ ನೀಡಿದ್ದು, ಈ ಆಪ್ ಈಗಾಗಲೇ ತಯಾರಾಗಿದ್ದು ಇದನ್ನು ಸಾರ್ವಜನಿಕ ತಾಣದಲ್ಲಿ ಹೋಸ್ಟ್ ಮಾಡುವ ಮೊದಲು ಇದರ Auditing ಕಾರ್ಯ ಮಾಡಬೇಕಾಗಿರುವುದರಿಂದ ನಿಯಮದಂತೆ Auditing ಮಾಡುವ ಸಂಸ್ಥೆಗಳಿಂದ ಕೊಟೇಷನ್ ಕರೆದಿದ್ದು Sumeru Software Solutions Pvt Lmt ಅತೀ ಕಡಿಮೆ ದರ ಸೂಚಿಸುವ ಸಂಸ್ಥೆಯಾಗಿದ್ದು ಸದರಿ ಸಂಸ್ಥೆಯವರಿಗೆ ಕಾರ್ಯಾದೇಶ ನೀಡಲಾಗಿದೆ ಎಂಬ ಅಂಶವನ್ನು ಕಾರ್ಯದರ್ಶಿಯವರು ಸಭೆಗೆ ತರಲಾಗಿ, ಮುಂದಿನ ಕ್ರಮವಹಿಸಲು ಒಪ್ಪಿಗೆ ಸೂಚಿಸಿತು.

ಕ್ರಮ ಕಾರ್ಯದರ್ಶಿ

3) ಆಯೋಗವು ನೂತನ ಕಟ್ಟಡಕ್ಕೆ ಸ್ಥಳಾಂತರಗೊಳ್ಳುವ ಮೊದಲು ಔಪಚಾರಿಕವಾಗಿ BESCOM, BWSSB, BSNL, PMG, HOUSE KEEPING ಗಾಗಿ ಹಾಗೂ ಇನ್ನಿತರ ಅವಶ್ಯಕ ಸಂಸ್ಥೆಗಳೊಂದಿಗೆ ಪತ್ರವ್ಯವಹಾರ ನಡೆಸಲು ಸಭೆ ಕಾರ್ಯದರ್ಶಿಯವರಿಗೆ ಸೂಚಿಸಿತು.

ಕ್ರಮ ಕಾರ್ಯದರ್ಶಿ

4) ಆಯೋಗದ ಕೆಲಸಗಳಿಗೆ ಅನುವಾಗುವಂತೆ ಕಛೇರಿಯಲ್ಲಿ ದುರಸ್ಥಿಯಲ್ಲಿರುವ ಗಣಕಯಂತ್ರಗಳನ್ನು ಬದಲಿಸಿ ಹೊಸ ಗಣಕಯಂತ್ರಗಳನ್ನು ನೀಡುವಂತೆ ಆಯುಕ್ತರುಗಳು ಕೋರಿದ ಹಿನ್ನಲೆಯಲ್ಲಿ, ಆಯೋಗದ ಎಲ್ಲಾ ಕೋರ್ಟ್‌ಹಾಲ್‌ಗಳಿಗೆ ತಲಾ ಎರಡರಂತೆ ಹಾಗೂ ಸಿಬ್ಬಂದಿ ಶಾಖೆಗಳಿಗೆ ತಲಾ ಒಂದರಂತೆ ಗಣಕಯಂತ್ರಗಳನ್ನು ಹಾಗೂ ಪ್ರಿಂಟರ್‌ಗಳನ್ನು ನಿಯಮಾನುಸಾರ ಖರೀದಿಸಿ ಒದಗಿಸಲು ಕ್ರಮ ಕೈಗೊಳ್ಳುವಂತೆ ಕಾರ್ಯದರ್ಶಿಯವರಿಗೆ ಸೂಚಿಸಿತು.

ಕ್ರಮ ಕಾರ್ಯದರ್ಶಿ

5) ಆಯೋಗದ ನೂತನ ಕಟ್ಟಡದ ಉದ್ಘಾಟನಾ ದಿನಾಂಕವು ಸಮೀಪದಲ್ಲಿರುವುದರಿಂದ ಉದ್ಘಾಟನಾ ಪೂರ್ವ ಕೆಲಸಗಳು ಹಾಗೂ ಸ್ಥಳಾಂತರಗೊಳ್ಳುವ ಪೂರ್ವದ ಕೆಲಸ-ಕಾರ್ಯಗಳು ಹೆಚ್ಚಾಗಿರುವುದರಿಂದ ಆಯೋಗದ ಎಲ್ಲಾ ನೌಕರರಿಗೂ ಈಗಿರುವ ಕೆಲಸಗಳೊಂದಿಗೆ ಹೆಚ್ಚುವರಿಯಾಗಿ ಕೆಲಸಗಳನ್ನು ನಿರ್ವಹಿಸಲು ಕಾರ್ಯದರ್ಶಿಯವರಿಗೆ ಸೂಚಿಸುತ್ತಾ, ಹೆಚ್ಚುವರಿ ಕಾರ್ಯಾವಧಿ ಮೇಲೆ ಕಾರ್ಯನಿರ್ವಹಿಸುವ ನೌಕರರುಗಳಿಗೆ ಸೌಕರ್ಯಗಳನ್ನು ಒದಗಿಸುವಂತೆ ಸಭೆ ತೀರ್ಮಾನಿಸಿತು.

ಕ್ರಮ ಕಾರ್ಯದರ್ಶಿ

sd/ 10/1/2017

ಮಾನ್ಯ ರಾಜ್ಯ ಮುಖ್ಯ ಮಾಹಿತಿ ಆಯುಕ್ತರು (ಪ್ರ)